**ಎಮ್.ವಿ.ಸಿ. ನಂಃ 563/2024**
**ಪಿ.ಡಬ್ಲ್ಯೂ:1,**

**ದಿನಾಂಕ : 25-09-2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟಿ ಸವಾಲು :- ಶ್ರೀ ಬಿ ಎಸ್ ಕೆ ಎದುರುದಾರ ಪರ ವಕೀಲರಿಂದ :**

ಅಪಘಾತವು ದಿ:20-02-2024 ರಂದು ಚಿತ್ತಾಪೂರ ಮತ್ತು ರಾವೂರ ರಸ್ತೆಯಲ್ಲಿ ಆಗಿರುತ್ತೆದೆ. ಅಪಘಾತ ಆದ ನಂತರ ನನ್ನನ್ನು ಕಾರಿನಲ್ಲಿ ಕುರಾಳ ಆಸ್ಪತ್ರೆಗೆ ಕರೆದುಕೊಂಡು ಹೋಗಿ ಅಲ್ಲಿ 2 ವಾರಗಳ ತನಕ ದಾಖಲಿಸಿದರು. ನಾನು ಮೋಟಾರ ಸೈಕಲ ನಂಬರ : ಕೆಎ-32-ಕ್ಯೂ-1998 ರಲ್ಲಿ ಹೊರಟ್ಟಿದೆ ಮೋಟಾರ ಸೈಕಲ ನಂ: ಕೆಎ-32-ಇವಾಯ-1135 ಹಿಂದಿನಿಂದ ಬಂದು ಡಿಕ್ಕಿ ಪಡಿಸಿರುತ್ತದೆ. ಅಪಘಾತ ಪಡಿಸಿದ ಮೋಟಾರ ಸೈಕಲ ಸವಾರನಿಗೆ ಸ್ವಲ್ಪ ಗಾಯ ಆಗಿದೆ. ಆತನಿಗೆ ಆಸ್ಪತ್ರೆಗೆ ದಾಖಲಿಸಿಲ್ಲಾ. ಆಸ್ಪತ್ರೆಯಲ್ಲಿ ಬಲಗಾಲಿಗೆ ಶಸ್ತ್ರ ಚಿಕಿತ್ಸೆ ಮಾಡಿ ರಾಡ್ ಅಳವಡಿಸಿರುತ್ತಾರೆ. ಆಸ್ಪತ್ರೆಯಲ್ಲಿ ನನಗೆ ರೂ.3,50,000/- ಹಣ ಖರ್ಚು ಆಗಿದೆ. ನನಗೆ ಸಂಪೂರ್ಣ ಗುಣಮುಖವಾಗಿದೆ. ಡಿಸಚಾರ್ಜ ಆದ ದಿನ ನನಗೆ ನನೆಪಿಲ್ಲಾ. ಆಸ್ಪತ್ರೆಯಲ್ಲಿ ದಾಖಲಾದ ಬಗ್ಗೆ ಎಮ್, ಎಲ್. ಸಿ. ಆದ ಬಗ್ಗೆ ದಾಖಲೆಗಳನ್ನು ಹಾಜರು ಪಡಿಸಿದ್ದೇನೆ. ನಾನು ಚಲಾಯಿಸುತ್ತಿದ್ದ ವಾಹನದ ನಾನೇ ಮಾಲಿಕ ಆಗಿರುತ್ತೇನೆ. ನನ್ನ ಡಿ.ಎಲ್. ಮತ್ತು ಆರ್. ಸಿ. ಸಲ್ಲಿಸಿರುತ್ತೇನೆ. ಡಿಕ್ಕಿ ಪಡಿಸಿದ ವಾಹನ ಚಾಲಕ ಡಿ.ಎಲ್. ಮತ್ತು ಆರ್. ಸಿ. ಹಾಜರು ಪಡಿಸಿಲ್ಲಾ. ಆಸ್ಪತ್ರೆಯಲ್ಲಿ ನನಗೆ ರೂ.3,50,000/- ಹಣ ಖರ್ಚು ಆಗಿದೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ . ಹೆಚ್ಚಿನ ಚಿಕಿತ್ಸೆಗಾಗಿ ರೂ.2,50,000/- ಹಣ ಬೇಕಾಗುತ್ತದೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ನಾನು ತೊಗರಿ ಹೊಟ್ಟನ್ನು ಮಾರಾಟ ಮಾಡುತ್ತೇನೆ. ನಾನು ಸದರಿ ವ್ಯಾಪಾರದಿಂದ ರೂ 25,000/- ತಿಂಗಳಿಗೆ ಗಳಿಸುತ್ತೇನೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ನನಗೆ ತಿಂಗಳಿಗೆ 7 ರಿಂದ 8 ಸಾವಿರ ಆದಾಯ ಇದೆ ಎಂದರೆ ಸರಿಯಲ್ಲ .

**ಎಮ್.ವಿ.ಸಿ. ನಂಃ 563/2024**
**ಪಿ.ಡಬ್ಲ್ಯೂಃ1,**

ಅಪಘಾತ ಆದಾಗ ನನಗೆ 33 ವರ್ಷ ಇತ್ತು ಎಂದರೆ ಸರಿಯಲ್ಲ . ನನ್ನ ಆಧಾರ ಕಾರ್ಡನಲ್ಲಿ ಜನ್ಮ ದಿನಾಂಕ: 1984 ಬರೆದಿದೆ ಎಂದರೆ ಸರಿ. ನನ್ನ ಆಧಾರ ಕಾರ್ಡ ಪ್ರಕಾರ ನನಗೆ ಅಪಘಾತ ಆದ ದಿನದಂದು ನನ್ನ ವಯಸ್ಸು 40 ಎಂದರೆ ಸರಿಯಲ್ಲ. ನಾನು ಕೇಳಿರುವ ಪರಿಹಾರಕ್ಕೆ ಯಾವುದೇ ಆಧಾರ ಇಲ್ಲಾ ಎಂದರೆ ಸರಿಯಲ್ಲ . ನಾನು ನಿಪಿ-1 ರಿಂದ 13 ಸೃಷ್ಟಿಸಿ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ದೂರನ್ನು ಅಬ್ದುಲ ಜಲೀಲ ನೀಡಿದ್ದಾನೆ ಅವರು ನನ್ನ ಅಣ್ಣ. ಅಪಘಾತ ಆದ 2 ದಿನಗಳ ನಂತರ ದೂರು ಸಲ್ಲಿಸಲಾಗಿದೆ ಎಂದರೆ ಸರಿ. ನನ್ನ ಹೇಳಿಕೆಯನ್ನು 2 ದಿನಗಳ ನಂತರ ಪಡೆದಿದ್ದಾರೆ. ನನ್ನ ಅಣ್ಣ ಮತ್ತು 1ನೇ ಎದುರುದಾರ ಸೇರಿ ಅಪಘಾತದಲ್ಲಿ ವಾಹನ ಸೇರ್ಪಡೆ ಮಾಡಿದ್ದಾರೆ ಎಂದರೆ ಸರಿಯಲ್ಲ . ನಾನೇ ಮೋಟಾರ ಸೈಕಲ ಮೇಲಿಂದ ಬಿದ್ದು ಗಾಯ ಪಡಿಸಿಕೊಂಡಿದ್ದು, ಪರಿಹಾರ ಸಿಗುವುದಿಲ್ಲಾ ಎಂದು ತಿಳಿದು ಬೇರೆ ವಾಹನವನ್ನು ಸೇರ್ಪಡೆ ಮಾಡಿದ್ದೇನೆ ಎಂದರೆ ಸರಿಯಲ್ಲ. ಮೋಟಾರ ಸೈಕಲ ನಂ: ಕೆಎ-32-ಇವಾಯ-1135 ಈ ವಾಹನದ ಅಪಘಾತದಲ್ಲಿ ಪಾತ್ರ ಇಲ್ಲಾ ಎಂದರೆ ಸರಿಯಲ್ಲ . ನಾನು ಸುಳ್ಳು ಸಾಕ್ಷಿ ಪ್ರಮಾಣ ಪತ್ರ ಸಲ್ಲಿಸಿ, ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. 2ನೇ ಎದುರುದಾರ ಪರಿಹಾರ ನೀಡಲು ಭಾಧ್ಯಸ್ಥರು ಅಲ್ಲಾ ಎಂದರೆ ಸರಿಯಲ್ಲ . ನಾನು ಸಂಪೂರ್ಣ ಗುಣಮುಖವಾಗಿ ಗಾಯಗಳು ವಾಸಿ ಆಗಿವೆ ಎಂದರೆ ಸರಿಯಲ್ಲ. ನಾನು ಸಂಪೂರ್ಣ ಕೆಲಸ ಮಾಡುತ್ತೇನೆ ಎಂದರೆ ಸರಿಯಲ್ಲ .

**ಮರು ವಿಚಾರಣೆ : ಇಲ್ಲಾ**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು)**

**ಓ.ಹೇ.ಕೇ.ಸರಿ.ಇದೆ.**

**ಹಿರಿಯ ಸಿವಿಲ್ ನ್ಯಾಯಾಧೀಶರು**

ಚಿತ್ತಾಪೂರ.